International Journal of Kannada Research
www.kannadajournal.com

ISSN: 2454–5813
IJKR 2019; 5(3): 19-21
© 2019 IJKR
www.kannadajournal.com
Received: 11-05-2019
Accepted: 15-06-2019

**ಎಸ್. ಸಿದ್ದೇಗೌಡ**
ಕನ್ನಡ ಸಹಾಯಕ ಪ್ರಾಧ್ಯಾಪಕ,
ಮಹಾರಾಣಿ ಮಹಿಳಾ ವಿಜ್ಞಾನ
ಕಾಲೇಜು (ಸ್ವಾಯತ್ತ), ಮೈಸೂರು

**Correspondence**
**ಎಸ್. ಸಿದ್ದೇಗೌಡ**
ಕನ್ನಡ ಸಹಾಯಕ ಪ್ರಾಧ್ಯಾಪಕ,
ಮಹಾರಾಣಿ ಮಹಿಳಾ ವಿಜ್ಞಾನ
ಕಾಲೇಜು (ಸ್ವಾಯತ್ತ), ಮೈಸೂರು

# ಕನ್ನಡ ಸಾರಸ್ವತ ಲೋಕದ ಅಲಕ್ಷಿತ ಸಾಹಿತಿ: ಡಾ. ಜಿ.ವಿ. ದಾಸೇಗೌಡ

**ಎಸ್. ಸಿದ್ದೇಗೌಡ**

ತಮ್ಮ ಜೀವನದುದ್ದಕ್ಕೂ ಕನ್ನಡ ಸಾಹಿತ್ಯ ಸೇವೆಯನ್ನು ಮಾಡುತ್ತಾ ಯಾರ ಕಣ್ಣಿಗೂ ಬೀಳದೆ, ಗುರುತಿಸಿಕೊಳ್ಳದೆ, ಗೌರವ ಮನ್ನಣೆಗಳನ್ನು, ಪ್ರಶಸ್ತಿ ಪುರಸ್ಕಾರಗಳನ್ನು ಪಡೆಯದೆ ನಿರ್ಲಕ್ಷ್ಯಕ್ಕೆ ಒಳಗಾಗಿ ಎಲೆ ಮರೆ ಕಾಯಿಯ ಹಾಗೆ ಇದ್ದು ಮರೆಯಾಗಿ ಹೋದ ಎಷ್ಟೋ ಅಲಕ್ಷಿತ ಸಾಹಿತಿಗಳು ಇದ್ದಾರೆ. ಅಂತಹವರ ಸಾಲಿನಲ್ಲಿ ಕಂಡುಬರುವ ಕ್ರಿಯಾಶೀಲ ಸಾಹಿತಿ, ವಿಮರ್ಶಕ, ನಾಟಕಕಾರ, ಕಾದಂಬರಿಕಾರ, ಕಥೆಗಾರ, ಪ್ರಬಂಧಕಾರ, ಸಂಶೋಧಕ, ಜಾನಪದ ತಜ್ಞ ಹೀಗೆ ಬಹುಮುಖ ಪ್ರತಿಭೆಯುಳ್ಳ ಡಾ. ಜಿ.ವಿ. ದಾಸೇಗೌಡ ಅವರೂ ಕೂಡ ಒಬ್ಬರು. ಇವರು ಜಿ.ವಿ.ಡಿ. ಎಂಬ ಕಾವ್ಯನಾಮದಿಂದಲೇ ಸಾಹಿತ್ಯ ಕೃಷಿಯನ್ನು ಮಾಡಿ ಕನ್ನಡ ಸಾಹಿತ್ಯಕ್ಕೆ 50ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ನೀಡುವುದರ ಮೂಲಕ ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅನೇಕ ಕ್ರಿಯಾಶೀಲ ಸಾಹಿತ್ಯ ಕೃತಿಗಳನ್ನು ರಚಿಸಿದ್ದರೂ ಇವರ ಪ್ರಮುಖ ಆಸಕ್ತಿಯ ಕ್ಷೇತ್ರ ಜಾನಪದ. ಹಾಗಾಗಿ ಇವರು ಜಾನಪದ ತಜ್ಞರೆಂದೇ ಗುರುತಿಸಿಕೊಂಡಿದ್ದಾರೆ. ಅದು ಎಷ್ಟರ ಮಟ್ಟಿಗೆ ಎಂದರೆ ಇವರ ಸ್ನೇಹಿತರೆಲ್ಲರೂ ಇವರನ್ನು ಗುರುತಿಸುತ್ತಿದ್ದುದು 'ಜನಪದದ ದಾಸೇಗೌಡ' ಎಂದೇ ಎಂದು ಅವರೇ ಹೇಳಿಕೊಂಡಿದ್ದಾರೆ.

## ಬಾಲ್ಯ ಮತ್ತು ಶಿಕ್ಷಣ

ಡಾ. ಜಿ.ವಿ. ದಾಸೇಗೌಡ ಅವರು 1944ರಲ್ಲಿ ಮಂಡ್ಯದ ಗುತ್ತಲು ಗ್ರಾಮದಲ್ಲಿ ಜನಿಸಿದರು. ಸಮಾಜದಲ್ಲಿನ ಹಿಂದುಳಿದ ಈಡಿಗ ಜನಾಂಗದ ಬಡ ರೈತ ಕುಟುಂಬ ಇವರದು. ಇವರ ತಂದೆ ತಾಯಿಗಳು ಶ್ರೀ ವೆಂಕಟೇಗೌಡ ಮತ್ತು ಹೊಸೂರಮ್ಮ. ಜಿ.ವಿ.ಡಿ ಅವರು ಗುತ್ತಲಿನ ಪ್ರಸಿದ್ಧ ಅರಕೇಶ್ವರ ದೇವಾಲಯ, ಜನಪದ ಆಟ, ಕ್ರೀಡೆ ಮೊದಲಾದವುಗಳ ಪರಿಸರದಲ್ಲಿ ಬೆಳೆದವರು. ಇವೆಲ್ಲದರ ಗಾಢ ಪ್ರಭಾವವನ್ನು ಅವರ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕಾಣಬಹುದು.

ತಮ್ಮ ಪ್ರಾಥಮಿಕ ಶಿಕ್ಷಣವನ್ನು ಗುತ್ತಲುವಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆರಂಭಿಸಿದರು. ಜಿ.ವಿ.ಡಿ ಅವರಿಗೆ ಶಾಲೆಗೆ ಹೋಗುವುದಕ್ಕೆ ಇಷ್ಟವಿರಲಿಲ್ಲವಾದ ಕಾರಣ ತಡವಾಗಿ ಶಾಲೆಗೆ ಸೇರಿದರು. ಆಗಲೂ ಶಾಲೆಗೆ ಹೋಗಲು ನಿರಾಕರಿಸಿ ಹಠ ಮಾಡಿದಾಗ ಅವರ ತಂದೆ ಸರಿಯಾಗಿ ಒಂದು ಪೆಟ್ಟು ನೀಡಿದ್ದರಿಂದ ಹೆದರಿ ಶಾಲೆಗೆ ಹೋಗಲು ಶುರುಮಾಡಿದರೆಂದು ತಾವೇ ಒಂದು ಕಡೆ ಹೇಳಿಕೊಂಡಿದ್ದಾರೆ.. ''ಶಿಕ್ಷೆಯಿಂದ ಶಿಕ್ಷಣ ಎನ್ನುತ್ತಾರೆ. ಅದೇ ರೀತಿ ತಂದೆಯ ಪೆಟ್ಟು ಇಲ್ಲದಿದ್ದಲ್ಲಿ ನಾನು ಅನಕ್ಷರಸ್ಥನಾಗಿಯೇ ಉಳಿದುಬಿಡುತ್ತಿದ್ದನೇನೋ'' ಎಂದು ಈ ಘಟನೆಯನ್ನು ಸ್ಮರಿಸಿಕೊಂಡಿದ್ದಾರೆ. ಪ್ರಾಥಮಿಕ ಶಾಲೆಯ ಹಂತದಲ್ಲೇ ಇವರಿಗೆ ಒಳ್ಳೆಯ ಗುರುಗಳು ದೊರೆತು ಉತ್ತಮ ಸಂಸ್ಕಾರವನ್ನು ಕಲಿಯಲು, ಪುರಾಣಗಳ ಕಡೆಗೆ ಒಲವು ಉಂಟಾಗಲು ಸಾಧ್ಯವಾಯಿತು. ಈ ಹಂತದಲ್ಲಿ ಇವರ ಮೇಲೆ ಪ್ರಭಾವ ಬೀರಿದ ಗುರುಗಳೆಂದರೆ ಜಿ. ಎ. ಅರಕಯ್ಯ ಮತ್ತು ಮಾದಯ್ಯ ಎನ್ನುವವರು. ಅದರಲ್ಲೂ ಮಾದಯ್ಯ ಅವರ ರಾಮಾಯಣದ ಪಾಠ ಇವರನ್ನು ಬಹುವಾಗಿ ಆಕರ್ಷಿಸಿತು.

ಮಾಧ್ಯಮಿಕ ಶಿಕ್ಷಣಕ್ಕಾಗಿ ಮಂಡ್ಯದ ಶುಗರ್‌ಟೌನ್‌ಗೆ ಸೇರುತ್ತಾರೆ.. ಆದರೆ ಅದೇ ವರ್ಷ ಗುತ್ತಲುವಿನಲ್ಲಿಯೇ ಮಾಧ್ಯಮಿಕ ಶಾಲೆ ಆರಂಭವಾದುದರಿಂದ ವಾಪಸ್ಸು ಗುತ್ತಲು ಮಾಧ್ಯಮಿಕ ಶಾಲೆಗೆ ಬಂದು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಾರೆ. ಈ ವೇಳೆಗೆ ಜಿ.ವಿ.ಡಿ ಅವರಿಗೆ ರಾಮಾಯಣವನ್ನು ಓದುವ ಆಸೆ ಉಂಟಾಗುತ್ತದೆ. ಆದರೆ ಪುಸ್ತಕವನ್ನು ಕೊಂಡುಕೊಳ್ಳುವ ಸಾಮರ್ಥ್ಯವಿರಲಿಲ್ಲ. ಕೊನೆಗೆ ಚಿಕ್ಕಚನ್ನೇಗೌಡ ಎನ್ನುವವರ ಮನೆಯಲ್ಲಿ ರಾಮಾಯಣದ ಪುಸ್ತಕ ಇದೆ ಎಂದು ತಿಳಿದು, ಅವರನ್ನು ಕಾಡಿ–ಬೇಡಿ ಪಡೆದುಕೊಂಡು ಬಂದು ಓದಿ ಮುಗಿಸುತ್ತಾರೆ. ಅಲ್ಲಿಂದ ಅವರಿಗೆ ಪುರಾಣಗಳ ಬಗ್ಗೆ ಒಂದು ರೀತಿಯಲ್ಲಿ ಕಾಡುವ ಪ್ರಜ್ಞೆ ಉಂಟಾಗುತ್ತದೆ. ಪ್ರೌಢಶಿಕ್ಷಣ ಶುಗರ್‌ಟೌನ್‌ನಲ್ಲಿ ನಡೆಯಿತು. ಇಲ್ಲಿ ಶಿಕ್ಷಕಿಯಾಗಿದ್ದ ತಮಿಳಿನ ರಾಜಮ್ಮ ಅವರ ಕನ್ನಡ ಬೋಧನೆ ಇವರ ಮೇಲೆ ಪ್ರಭಾವವನ್ನು ಉಂಟುಮಾಡಿತು. ಇದರ ಪರಿಣಾಮ ಅನಕೃ, ತರಾಸು ಅವರ ಕಾದಂಬರಿಗಳನ್ನು ಹೆಚ್ಚಾಗಿ ಓದಲು ಆರಂಭಿಸುತ್ತಾರೆ.

ಪಿ.ಯು.ಸಿ. ಶಿಕ್ಷಣ ಸರಕಾರಿ ಕಾಲೇಜು, ಮಂಡ್ಯದಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿ ನಡೆಯಿತು. ಕಾಲೇಜು ವ್ಯಾಸಂಗಕ್ಕೆ ಕುಟುಂಬದಿಂದ ಉತ್ತೇಜನ ದೊರೆಯಲಿಲ್ಲ. ವ್ಯಾಸಂಗವನ್ನು ಮುಂದುವರೆಸಬೇಕೆಂಬ ಅದಮ್ಯ ಬಯಕೆ, ಆಕಾಂಕ್ಷೆ

ಜಿ.ವಿ.ಡಿ ಅವರದು. ನನ್ನ ಪಾಲಿನ ಆಸ್ತಿಯನ್ನಾದರೂ ಮಾರಿ ಓದಿಸಿ ಎಂದು ತಂದೆ ತಾಯಿಗಳಿಗೆ ಪೀಡಿಸುತ್ತಾರೆ. ಇಂತಹ ಸಂದರ್ಭದಲ್ಲಿ ಇವರ ಪ್ರೌಢಶಾಲೆಯ ಗುರುಗಳಾದ ಶ್ರೀ ಯು.ವಿ. ವೆಂಕಟರಮಣ ಅವರ ನೆರವಿನಿಂದ ವ್ಯಾಸಂಗ ಮುಂದುವರೆಸಿ ಪದವಿಯನ್ನು ಪಡೆಯುತ್ತಾರೆ. ಪಿ.ಯು.ಸಿ ಯಲ್ಲಿ ವಿಜ್ಞಾನದ ವಿದ್ಯಾರ್ಥಿಯಾದರೂ ಶಾಲಾ ಹಂತದಿಂದಲೂ ಸಾಹಿತ್ಯದ ಬಗ್ಗೆ ಒಲವಿದ್ದುದರಿಂದ ಪದವಿಯಲ್ಲಿ ಐಚ್ಛಿಕ ಕನ್ನಡವನ್ನು ಆಯ್ಕೆ ಮಾಡಿಕೊಂಡು, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪದವಿಯನ್ನು ಪಡೆದರು. ಪದವಿ ಅಧ್ಯಯನ ಮಾಡುವಾಗ ಜಿ.ವಿ.ಡಿ ಅವರು ಮಂಡ್ಯದಿಂದ ಮೈಸೂರಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಆ ಸಂದರ್ಭದಲ್ಲಿ ದಿನಕ್ಕೊಂದು ಲೈಬ್ರರಿ ಪುಸ್ತಕ ಅಧ್ಯಯನ ಮಾಡಬೇಕೆಂದು ತೀರ್ಮಾನಿಸಿ, ಪಠ್ಯ ಪುಸ್ತಕಗಳ ಜೊತೆ ಲೈಬ್ರರಿಯಲ್ಲಿ ಪುಸ್ತಕವನ್ನು ಎರವಲು ಪಡೆದುಕೊಂಡು ಪ್ರಯಾಣದ ಸಂದರ್ಭದಲ್ಲೆಲ್ಲ ಓದಲು ಆರಂಭಿಸಿದರು. ಹೀಗೆ 1967–68ರಲ್ಲಿ ಬಿ.ಎ ಪದವಿಯನ್ನೂ ಮಾನಸ ಗಂಗೋತ್ರಿಯಲ್ಲಿ 1969–70ರಲ್ಲಿ ಎಂಎ (ಕನ್ನಡ) ಪದವಿಯನ್ನೂ ಪಡೆದರು. 1995ರಲ್ಲಿ ಡಾ. ಹಂಪನಾಗರಾಜಯ್ಯ ಅವರ ಮಾರ್ಗದರ್ಶನದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ "ಬಂಧುವರ್ಮ – ಒಂದು ಅಧ್ಯಯನ" ಎಂಬ ಪ್ರೌಢಪ್ರಬಂಧಕ್ಕೆ ಡಾಕ್ಟರೇಟ್ (ಪಿಎಚ್.ಡಿ) ಪದವಿಯನ್ನು ಪಡೆದರು.

**ವೃತ್ತಿ ಜೀವನ**

ಕನ್ನಡ ಎಂ.ಎ ಪದವಿಯನ್ನು ಪಡೆದ ತರುವಾಯ 1970ರಲ್ಲಿ ಕೆ.ಎಂ ದೊಡ್ಡಿಯ ಭಾರತೀ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗುವುದರ ಮೂಲಕ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. 1975ರಲ್ಲಿ ಸರ್ಕಾರಿ ಕಾಲೇಜಿನ ಖಾಯಂ ಅಧ್ಯಾಪಕರಾಗಿ ನೇಮಕಗೊಂಡು ಮಡಿಕೇರಿ, ತುಮಕೂರು, ಮಹಿಳಾ ಕಾಲೇಜು, ಮಂಡ್ಯ, ಬಾಲಕರ ಕಾಲೇಜು, ಮಂಡ್ಯ ಇಲ್ಲಿ ಅಧ್ಯಾಪಕರಾಗಿ ಸೇವೆಸಲ್ಲಿಸಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಳವಳ್ಳಿ ಇಲ್ಲಿ ಪ್ರಾಂಶುಪಾಲರಾಗಿ ಅನಂತರ ಬಾಲಕರ ಕಾಲೇಜು, ಮಂಡ್ಯ ಇಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ 2002ರಲ್ಲಿ ಸೇವೆಯಿಂದ ನಿವೃತ್ತರಾಗಿದ್ದಾರೆ. ಬೋಧನೆಯ ಜೊತೆ ಜೊತೆಗೆ ಬರವಣಿಗೆಯನ್ನು ಮಾಡುತ್ತಾ ವಿದ್ಯಾರ್ಥಿಗಳ ಮೆಚ್ಚಿನ ಅಧ್ಯಾಪಕರಾಗಿದ್ದರು. ಮಡಿಕೇರಿಯಲ್ಲಿ ಅಧ್ಯಾಪಕರಾಗಿದ್ದಾಗ ಕನ್ನಡದ ವರನಟ ಡಾ. ರಾಜಕುಮಾರ್ ಅವರೊಂದಿಗೆ ಒಡನಾಟವನ್ನು ಹೊಂದಿದ್ದರು. ಡಾ. ರಾಜ್ ಅವರು ಕಾದಂಬರಿ ಆಧಾರಿತ ಸಿನಿಮಾಗಳನ್ನು ಮಾಡುವಾಗ ಇವರ ಬಳಿ ಚರ್ಚಿಸಿ, ಅಗತ್ಯ ಸಲಹೆಗಳನ್ನು ಪಡೆಯುತ್ತಿದ್ದರು. ಈ ಬಗ್ಗೆ ಒಂದು ಘಟನೆಯನ್ನು ಸ್ಮರಿಸಿಕೊಳ್ಳುತ್ತಾರೆ. "ಹುಲಿಯ ಹಾಲಿನ ಮೇವು" ಕಾದಂಬರಿ ಆಧಾರಿತ ಸಿನಿಮಾ ಬಗ್ಗೆ ಚರ್ಚೆ ಮಾಡುವಾಗ ಜಿ.ವಿ.ಡಿ ಅವರು ಭಾರತೀಸುತ ಅವರು ಕೊಡವ ಭಾಷೆಯನ್ನು ಕಾದಂಬರಿಯಲ್ಲಿ ಅಧಿಕವಾಗಿ ಬಳಸಿದ್ದಾರೆ. ಅದು ಆ ಸಂದರ್ಭಕ್ಕೆ ಸಹಜವಾದ ಅಪೇಕ್ಷೆ. ಆದರೆ ಅವೆಲ್ಲವನ್ನೂ ಕನ್ನಡೀಕರಣಗೊಳಿಸಿಬಿಟ್ಟರೆ ಮೂಲ ಕಾದಂಬರಿಯ ಸತ್ವ ಸೋರಿ ಹೋಗುತ್ತದೆ. ಹಾಗಾಗಿ ಚಿತ್ರ ಯಶಸ್ವಿಯಾಗುವುದು ಕಷ್ಟ ಎನಿಸುತ್ತದೆ ಎಂಬ ಸಲಹೆಯನ್ನು ನೀಡುತ್ತಾರೆ. ಅದೇ ರೀತಿ ಆ ಕಾಲದಲ್ಲಿ ಈ ಸಿನಿಮಾ ಸರಿಯಾದ ಯಶಸ್ಸನ್ನು ಕಾಣಲಿಲ್ಲ ಎಂದು ಸ್ಮರಿಸಿಕೊಳ್ಳುತ್ತಾರೆ.

ಜಿ.ವಿ.ಡಿ ಅವರು ಅಧ್ಯಾಪಕರಾಗಿ ಬೋಧನೆ ಮಾಡುವುದಲ್ಲದೆ, 1976ರಿಂದ ಆಡಳಿತ ಕನ್ನಡ ಶಿಬಿರದ ನಿರ್ದೇಶಕರಾಗಿ, ವಯಸ್ಕರ ಶಿಕ್ಷಣ ವಿಷಯ ತಜ್ಞರಾಗಿ, ರಾಷ್ಟ್ರೀಯ ಸೇವಾ ಯೋಜನೆಯ ಅಧಿಕಾರಿಯಾಗಿ ತುಮಕೂರು, ಮಂಡ್ಯದಲ್ಲಿ ಸೇವೆ ಸಲ್ಲಿಸಿದ್ದಾರೆ. ಖಾಸಗಿ ಕಾಲೇಜುಗಳಿಗೆ ಕನ್ನಡ ವಿಷಯ ತಜ್ಞರಾಗಿ ಆಯ್ಕೆ ಸಮಿತಿಗೆ ಕಾಲೇಜು ಶಿಕ್ಷಣ ಇಲಾಖೆ ರಾಯಚೂರಿಗೆ ಕಳುಹಿಸಿತ್ತು. ಮಡಿಕೇರಿ ಸರ್ಕಾರಿ ಕಾಲೇಜಿನ ವಿದ್ಯಾರ್ಥಿನಿಲಯದ ವಾರ್ಡನ್ ಆಗಿ ಕೆಲವು ವರ್ಷ ಸೇವೆ ಸಲ್ಲಿಸಿದ್ದಾರೆ. 1996 ಮತ್ತು 2000 ದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿಯೂ ಹಾಗೆಯೇ 1996 ಮತ್ತು 2000 ದಲ್ಲಿ ಮೈಸೂರಿನ ರೀಜನಲ್ ಕಾಲೇಜಿನ ಬಿ.ಎಡ್ ಕನ್ನಡ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಉಡುಪಿಯಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಜಾನಪದ ಶಿಬಿರದಲ್ಲಿ ತಜ್ಞರಾಗಿ ಭಾಗವಹಿಸಿದ್ದರು.

**ಸಾಹಿತ್ಯ ಕೃಷಿ**

ಜಿ.ವಿ.ಡಿ ಅವರ ಬರವಣಿಗೆ ಪ್ರೌಢಶಾಲೆಯಲ್ಲಿದ್ದಾಗಲೇ ಆರಂಭವಾಗುತ್ತದೆ. ಪ್ರೌಢಶಾಲೆಯಲ್ಲಿ 'ತೊದಲ್ನುಡಿ' ಎನ್ನುವ ಕೈ ಬರಹದ ಮ್ಯಾಗಜಿನ್ ತರಲಾಗುತ್ತಿತ್ತು. ಮ್ಯಾಗ್‌ಜಿನ್‌ಗಾಗಿ ಲೇಖನವೊಂದನ್ನು ಬರೆಯುತ್ತಾರೆ. ಇದೇ ಅವರ ಮೊದಲ ಬರವಣಿಗೆ. ಈ ಬರವಣಿಗೆಯನ್ನು ನೋಡಿ ಇವರ ಗುರುಗಳು 'ಎಲ್ಲಿ ಕದ್ದೆ?' ಎಂದು ಇವರನ್ನು ಕೇಳುತ್ತಾರೆ. ಆಗ ಇವರು 'ಇಲ್ಲ ನಾನೇ ಬರೆದೆ' ಎಂದಾಗ ಗುರುಗಳು 'ಓ ನೀನೇನು ದೊಡ್ಡ ಸಾಹಿತಿ' ಎಂದು ಗದರಿದ್ದರು ಎಂದು ಸ್ಮರಿಸಿಕೊಳ್ಳುತ್ತಾರೆ. ಪಿ.ಯು.ಸಿ ಅಧ್ಯಯನ ಮಾಡುವಾಗಲೇ ನಾಟಕದ ರಚನೆಗೆ ಕೈಹಾಕುತ್ತಾರೆ. ಮುಂದುವರೆದು ಇವರು ಪದವಿಯ ಗುರುಗಳಾದ ಎಸ್.ವಿ. ಪರಮೇಶ್ವರಭಟ್ಟ ಮತ್ತು ಸಿ.ಪಿ.ಕೆ ಅವರ ಪ್ರಭಾವ ಮತ್ತು ಮಾರ್ಗದರ್ಶನದಲ್ಲಿ ಸಾಹಿತ್ಯ ರಚನೆಗೆ ಧುಮುಕುತ್ತಾರೆ.

ಜಿ.ವಿ.ಡಿ ಅವರು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಬರವಣಿಗೆಯನ್ನು ಕೈಗೊಂಡು, ಸಾಹಿತ್ಯ ಪ್ರಪಂಚಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಜಿ.ವಿ.ಡಿ ಅವರ ರಚಿಸಿರುವ ಕೃತಿಗಳ ವಿವರ ಇಂತಿದೆ.

**ನಾಟಕ:**

1. ಆದರ್ಶದ ಹಂಬಲ – 1966
2. ಕಾಯಕವೇ ಕೈಲಾಸ ಮತ್ತು ಇತರ ರೂಪಕಗಳು – 1988

**ಕಥೆ:**

1. ನಂಜು ಬಡಿಯಿತು – 1968
2. ಮೌಲ್ಯಮಾಪನ – 1980

**ಪ್ರಬಂಧ:**

1. ತುಂಬಿ ಬಂದಿತು – 1976
2. ಕಾವಲು
3. ಮಿಂಚಿನ ಗೊಂಚಲು
4. ಜನಪದ ಪುರಾಣಗಳಲ್ಲಿ ದಲಿತ ಸಂವೇದನೆ ಮತ್ತು ಇತರ ಪ್ರಬಂಧಗಳು

**ವಿಮರ್ಶೆ:**

1. ಬಸವಣ್ಣನವರ ವಚನಗಳಲ್ಲಿ ಮಾನವೀಯತೆ – 1980
2. ವಚನಗಳಲ್ಲಿ ಭಾಷೆ ಮತ್ತು ಅಭಿವ್ಯಕ್ತಿ – 1993
3. ಸಾಹಿತ್ಯದ ವಿರಾಟ್ ಸ್ವರೂಪ–ಒಂದು ಸಮೀಕ್ಷೆ – 1996
4. ಸರ್ವಜ್ಞ ಮತ್ತು ಜಾನಪದ – 1997

**ಕವನ:**

1. ಮುಗಿಲ ಮಗಳು – 1975
2. ಬದುಕು ಬರೆಯಿತು – 1982

**ಕಾದಂಬರಿ:**

1. ಕಥೆಯಾದವರು – 1981
2. ಹೊಸಹೆಜ್ಜೆ – 1987 (ಹೊಸದಾರಿ ಎಂಬ ಹೆಸರಿನಲ್ಲಿ ಚಲನಚಿತ್ರವಾಗಿದೆ)
3. ಸಂಬಂಧ – 1990
4. ಮನೋವೀಣೆ – 2000

**ಜಾನಪದ:**

1. ಹಾವಾಗಿ ಹರಿದ ಅಣ್ಣಯ್ಯ – 1970
2. ಜನಪದ ವಿವರಣಾತ್ಮಕ ಕಥೆಗಳು – 1972
3. ನಮ್ಮ ಜನಪದ ನಂಬಿಕೆಗಳು – 1973
4. ಕರ್ನಾಟಕ ಶಿಶುಪ್ರಾಸಗಳು – 1976
5. ಕನ್ನಡ ಐತಿಹ್ಯಗಳು – 1978
6. ಕನ್ನಡದಲ್ಲಿ ಜಾನಪದದ ಕಲ್ಪನೆ ಮತ್ತು ಇತರ ಲೇಖನಗಳು – 1982
7. ನಾನು ಯಾರು? – 1982 (ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬಹುಮಾನಿತ ಕೃತಿ)
8. ಈಡಿಗರ ವಿವಾಹ ಪದ್ಧತಿ – 1983
9. ಜಾನಪದ ಚಿಂತನ – 1984
10. ಆಯ್ದ ಜನಪದ ಕಥೆಗಳು (ಇತರರೊಡನೆ) – 1970
11. ಕನ್ನಡ ಗಾದೆಗಳು – 1991
12. ತನಿ ಎರದವರೆ – 1995
13. ಜಾನಪದವನ್ನು ಕುರಿತು – 1996
14. ಸೌತೆಕಾಯಿನ ರಾಜಕುಮಾರಿ ಮತ್ತು ಇತರ ಕಥೆಗಳು – 1998
15. ಬಾಲನಾಗಮ್ಮ ಮತ್ತು ಇತರ ಕಥೆಗಳು – 1979
16. ಮಂಡ್ಯ ಜಿಲ್ಲೆಯ ಜಾತ್ರೆಗಳು – 1999

**ಅನುವಾದ:**

1. ಕಾಳಿಂಗರಾಯ – 1984

**ಮೀಮಾಂಸೆ:**

1. ಭಾರತೀಯ ಕಾವ್ಯ ಮೀಮಾಂಸೆ – 1992

**ಸಂಶೋಧನೆ:**

1. ಬಂಧುವರ್ಮ–ಒಂದು ಅಧ್ಯಯನ – 1995

**ಪ್ರಶಸ್ತಿ ಮತ್ತು ಗೌರವಗಳು**

ಜಿ.ವಿ.ಡಿ ಅವರಿಗೆ ಸಂದಿರುವ ಪ್ರಶಸ್ತಿ ಮತ್ತು ಗೌರವಗಳ ವಿವರ ಇಂತಿದೆ:

1. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ
2. ಜಾನಪದ ಸಿರಿ ಪ್ರಶಸ್ತಿ
3. ಕರ್ನಾಟಕ ರಾಜ್ಯ ಪ್ರಶಸ್ತಿ – 2010
4. 2014ರಲ್ಲಿ ನಡೆದ ಮಂಡ್ಯ ಜಿಲ್ಲಾ 4ನೇ ವಚನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ.
5. ಜೀವನ್ಮುಖಿ ಪ್ರಶಸ್ತಿ – 2013
6. ಇವಲ್ಲದೆ ಅನೇಕ ಸಂಘಸಂಸ್ಥೆಗಳು ಸನ್ಮಾನಿಸಿ, ಗೌರವಿಸಿವೆ.

ಜಿ.ವಿ.ಡಿ.ಯವರು ಕನ್ನಡ ಸಾಹಿತ್ಯದಲ್ಲಿ ಇಷ್ಟೆಲ್ಲಾ ಸಾಧನೆಯನ್ನು ಮಾಡಿದ್ದರೂ 'ನಾನು ಮಾಡಿದೆ' ಎಂಬ ಗರ್ವವನ್ನು ಹೊಂದಿದವರಲ್ಲ. ಬದಲಾಗಿ ನನ್ನೊಳಗಿರುವ ಯಾವುದೋ ಒಂದು ಶಕ್ತಿ ಈ ಎಲ್ಲವನ್ನು ಮಾಡಿಸಿದೆ; ನಾನು ನೆಪಮಾತ್ರ ಎಂಬ ಭಾವನೆ ಇವರದು. ಇಲ್ಲಿ ಕುಮಾರವ್ಯಾಸನ "ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ" ಎಂಬ ಮಾತು ನೆನಪಿಗೆ ಬರುತ್ತದೆ.

ಕನ್ನಡ ಸಾಹಿತ್ಯದ ಸಿರಿವಂತಿಕೆಯನ್ನು ಹೆಚ್ಚಿಸಲು ಜಿ.ವಿ.ಡಿ ಯವರು ಇಷ್ಟೆಲ್ಲಾ ಕೃತಿಗಳನ್ನು ಕೊಡುಗೆಯಾಗಿ ನೀಡಿದರೂ ಕನ್ನಡ ಸಾಹಿತ್ಯ ಇವರನ್ನು ಸರಿಯಾದ ರೀತಿಯಲ್ಲಿ ಗುರುತಿಸಲಿಲ್ಲ; ಗೌರವಿಸಲಿಲ್ಲ ಎಂಬ ಕೊರಗು ಅವರಲ್ಲಿತ್ತು. ಕೊನೆಯವರೆಗೂ ಎಲೆ ಮರೆ ಕಾಯಿಯ ಹಾಗೇ ನಿರ್ಲಕ್ಷ್ಯಕ್ಕೆ ಒಳಗಾಗಿ; ಮರೆಯಾಗಿ ಹೋಗಿದ್ದಾರೆ. ಶ್ರೀಯುತರು 21 ಏಪ್ರಿಲ್ 2019ರಂದು ಕೊನೆಯುಸಿರನ್ನು ಎಳೆದರು.

**ಪರಾಮರ್ಶನ ಗ್ರಂಥಗಳು:**


1. ಪುಣ್ಯಕೋಟಿ: ಸಂ. ಪ್ರೊ. ಜಿ.ಟಿ. ವೀರಪ್ಪ, ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು.
2. ಸಂದರ್ಶನ: ಮಂಡ್ಯದ ಸ್ವರ್ಣ ಟಿವಿಯಲ್ಲಿ ಪ್ರಸಾರವಾದ ಡಾ. ಜಿ.ವಿ ದಾಸೇಗೌಡರ ಸಂದರ್ಶನ.
3. ಹಸ್ತಪ್ರತಿ: ಡಾ. ಜಿ.ವಿ. ದಾಸೇಗೌಡ ಅವರೇ ರಚಿಸಿದ್ದ ವಯುಕ್ತಿಕ ಮಾಹಿತಿಯ ಹಸ್ತಪ್ರತಿ.